# SCHOOL ACADEMIC MASTER PLAN

## 2025-26




## G L P S KUDLU

## KASARAGOD

# ಮುನ್ನುಡಿ

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳ ಮುನ್ನಡೆಗೆ ಅನುಯೋಜ್ಯವಾದ ಎಲ್ಲಾ ಕಲಿಕಾ ವಿಧಾನಗಳನ್ನು ಅಳವಡಿಸುವುದು ಇಂದಿನ ವಿದ್ಯಾಭ್ಯಾಸ ಪದ್ಧತಿಯಾಗಿದೆ. ಆದರೂ ಕೆಲವೊಂದು ಮಕ್ಕಳು ಕಲಿಕೆಯಲ್ಲಿ ( ಓದುವಿಕೆ,ಬರವಣಿಗೆ) ಹಿಂದುಳಿದುಬಿಡುತ್ತಾರೆ. ಇದಕ್ಕೆ ಹಲವಾರು ಕಾರಣಗಳಿವೆ ಮಕ್ಕಳ ಕಲಿಕಾ ಮಟ್ಟ ಶಾಲಾ ಪರಿಸರ ಮನೆಯ ವಾತಾವರಣ ಸಮಾಜ ಇವೆಲ್ಲ ಕಾರಣಗಳಾಗಿವೆ

ಇದನ್ನೆಲ್ಲ ಮನ ಗಂಡು ಅಧ್ಯಾಪಕರು ಮಗುವಿನ ಕಲಿಕಾ ಮಟ್ಟವನ್ನು ಯಾವ ರೀತಿಯಲ್ಲಿ ಅಭಿವೃದ್ಧಿಪಡಿಸಬಹುದು ಎಂಬುದನ್ನು ಮನಗಂಡು ಇದಕ್ಕೆ ಪರಿಹಾರ ಬೋಧನೆ ಮಾಡಬೇಕು. ಇದಕ್ಕಾಗಿ ಹಲವಾರು ಓದುವಿಕೆ ಮತ್ತು ಬರವಣಿಗೆಗೆ ಸಂಬಂಧಪಟ್ಟ ಹಲವಾರು ಚಟುವಟಿಕೆಗಳನ್ನು ಕಂಡುಕೊಂಡು ಮಕ್ಕಳ ಕಲಿಕಾ ಮಟ್ಟವನ್ನು ಹೆಚ್ಚಿಸುವಲ್ಲಿ ಸಹಾಯ ಮಾಡುವ ಅಗತ್ಯವಿದೆ. ಇದಕ್ಕಾಗಿ ಹಲವಾರು ತಂತ್ರಗಳನ್ನು ಉಪಯೋಗಿಸಿ ಮಗು ಓದುವಿಕೆ ಮತ್ತು ಬರವಣಿಗೆಯಲ್ಲಿ ಉತ್ತಮ ಹಂತವನ್ನು ತಲುಪುವಂತೆ ಮಾಡಬಹುದು. ತರಗತಿ ಲೈಬ್ರರಿ ಶಾಲಾ ಲೈಬ್ರರಿ ಹಲವಾರು ಟೀಚಿಂಗ್ ಏಡ್ ನ ಸಹಾಯದೊಂದಿಗೆ ಈ ಚಟುವಟಿಕೆ ಹೆಚ್ಚು ಉತ್ತಮಗೊಳಿಸಬಹುದು. ಈ ಮೂಲಕ ಮಗು ಓದುವಿಕೆ ಮತ್ತು ಬರವಣಿಗೆಯಲ್ಲಿ ಯಶಸ್ವಿ ಆಗುವಂತೆ ಮಾಡಬಹುದು

ಇದೇ ರೀತಿ ಇಂಗ್ಲಿಷ್ ಭಾಷಾ ಅನಿವಾರ್ಯತೆ ಪ್ರತಿ ಸಣ್ಣ ತರಗತಿಯಲ್ಲಿ ಹೆಚ್ಚುತ್ತಾ ಹೋಗುತ್ತಿದೆ. ಹಾಗಾಗಿ ಅದನ್ನು ಅಲ್ಲ ಗೆಳೆಯುವಂತಿಲ್ಲ ನಿರಂತರ ಇಂಗ್ಲಿಷ್ ಆಲಿಸುವಿಕೆಗೆ ಅವಕಾಶ ನೀಡುವ ಸಜ್ಜೀಕರಣ ನಮ್ಮ ಮುಂದಿದೆ. ಈ ಶೈಕ್ಷಣಿಕ ವರ್ಷದಲ್ಲಿ ಪ್ರತಿ ಮಗು ಕನ್ನಡ ಇಂಗ್ಲಿಷ್ ಭಾಷಾ ವ್ಯವಹಾರಗಳು ಅತ್ಯುತ್ತಮವಾಗಿ ಕೈಗೊಳ್ಳಲು ಸಾಧ್ಯವಾಗಬೇಕೆನ್ನುವುದೇ ಈ ಯೋಜನೆಯ ಉದ್ದೇಶವಾಗಿದೆ. ಮಕ್ಕಳ ದೈಹಿಕ ಕಾರ್ಯಕ್ರಮದ ಹೆಚ್ಚಾಗುವಂತೆ ಮಾಡಲು ಆಟಗಳನ್ನು ಮಕ್ಕಳು ದಿನಕ್ಕೆ ಆಡಬೇಕು ಅದಕ್ಕೊಂದು ಆಟದ ಮೈದಾನದ ಅಗತ್ಯವು ನಮ್ಮ ಮುಂದಿದೆ

# ಚರಿತ್ರೆ

ಜಿ. ಎಲ್. ಪಿ. ಎಸ್. ಕೂಡ್ಲು ಶಾಲೆಯು 1920 ರ ಬ್ರಿಟಿಷ್ ತಾಲೂಕು ಮಂಡಳಿಯ ಅಧೀನದಲ್ಲಿ ಕಾಸರಗೋಡಿನ ಮಧೂರು ರಸ್ತೆಯ ಮೀಪುಗುರಿಯಲ್ಲಿ ಹುಲ್ಲಿನ ಶೆಡ್ ನಲ್ಲಿ ಒಂದರಿಂದ ಐದನೇ ತರಗತಿಗಳೊಂದಿಗೆ ಪ್ರಾರಂಭವಾಯಿತು. ಇಂದು ಮಕ್ಕಳ ಸಂಖ್ಯೆ ಕಡಿಮೆಯಾದುದರಿಂದ 1 ರಿಂದ 4 ರ ವರೆಗೆ ತರಗತಿಗಳು ಕಾರ್ಯವೆಸ ಗುತಿದೆ.

ಶಾಲೆಯು ಕನ್ನಡ ಹಾಗೂ ಮಲಯಾಳಂ ಮಾಧ್ಯಮ ಗಳಲ್ಲಿ ಕಾರ್ಯಾಚರಿಸುತ್ತಿದ್ದು ಒಟ್ಟು 8 ತರಗತಿ ಕೋಣೆಗಳನ್ನು ಹೊಂದಿದೆ. ವಿದ್ಯಾಲಯವು ಶಿಶುಕೇಂದ್ರೀತ ವಿದ್ಯಾಭ್ಯಾಸವನ್ನು ನೀಡುತ್ತಾ ಬಂದಿದ್ದು ಊರವರ ಹಾಗೂ ವಿವಿಧ ಸಂಘ ಸಂಸ್ಥೆ ಗಳ ಪೂರ್ಣ ಬೆಂಬಲದೊಂದಿಗೆ ಯಶಸ್ಸು ಪೋಣಿಸುತ್ತಾ ಬಂದಿರುತ್ತದೆ. ಈ ವಿದ್ಯಾಲಯವು ಪ್ರತೀ ಮಗುವಿನ ಅಭಿರುಚಿಯನ್ನು ಮನಗಂಡು ಪ್ರೋತ್ಸಾಹಿಸುತ್ತಿದೆ

# ಉದ್ದೇಶಗಳು

*ಶಿಸ್ತು, ಸಂಯಮ, ಸಮಯ ಪ್ರಜ್ಞೆ ಇತ್ಯಾದಿಗಳ ಅಗತ್ಯತೆಯ ಕುರಿತು ಧನಾತ್ಮಕ ಚಿಂತನೆಯನ್ನು ಕೈಗೊಳ್ಳುವುದು.

*ಓದುವಿಕೆ ಮತ್ತು ಬರವಣಿಗೆಯಲ್ಲಿ ಅಭಿವೃದ್ದಿಯನ್ನು ಕಾಣಲು ಸಾಧ್ಯವಾಗಿಸುವುದು.

*ಸ್ವಂತ ಅಭಿಪ್ರಾಯ ಮಂಡನೆ ಮಾಡಲಿರುವ ಸಾಮರ್ಥ್ಯಗಳಿಸುವುದು.

*ಜ್ಞಾನ ಅರ್ಜಿಸಿಕೊಳ್ಳಲಿರುವ ಚಟುವಟಿಕೆಗಳಲ್ಲಿ ಭಾಗಿಯಾಗಿ ಸ್ವಂತಿಕೆಯನ್ನು ಗಳಿಸಲಿರುವ ಸಾಮರ್ಥ್ಯ ಹೊಂದುವುದು.

* ಭಾಷಾ ವ್ಯವಹಾರಗಳು ಅತ್ಯುತ್ತಮ ಮಟ್ಟವನ್ನು ತಲುಪುವಂತಾಗಿಸುವುದು.

*ಆಂಗ್ಲ ಭಾಷೆ ಯಲ್ಲಿ ಹೆಚ್ಚಿನ ಒಲವು ತೋರಿಸಿ ಸಂದರ್ಭಕ್ಕನುಸರಿಸಿ ವ್ಯವಹರಿಸಲು ಪ್ರಾಪ್ತರಾಗಿಸುವುದು.

*ಪರಿಸರದೊಂದಿಗೆ ಬೆರೆತು ಪ್ರಾಯೋಗಿಕತೆಯೊಂದಿಗೆ ಬದುಕು ಸಾಗಿಸಬೇಕೆಂಬುದರ ನಿಜಾಂಶ ವನ್ನು ಮನಗಾಣಲು ಸಾಧ್ಯವಾಗಿಸುವುದು.

*ಯುಕ್ತಿಪರವಾದ ಚಿಂತನೆಯೊಂದಿಗೆ ಗಣಿತ ಆಶಯ ಅರ್ಥೈಸಿ ಕೊಳ್ಳಲಿರುವ ಆಸಕ್ತಿಯೊಂದಿಗೆ ಸಾಂದರ್ಭಿಕ ಜೀವನದಲ್ಲಿ ಗಣಿತಕ್ಕೆ ಮಹತ್ತರ ಪಾತ್ರವಿದೆ ಎಂಬುವುದನ್ನು ಅರಿಯಲು ಸಾಧ್ಯವಾಗುವುದು.

**ಶೈಕ್ಷಣಿಕ** **ಭಾಷೆ**

| ಉದ್ದೇಶ | ಚಟುವಟಿಕೆ | ಜವಾಬ್ದಾರಿ | ಕಾಲಾವಧಿ | ಹಣಕಾಸು |
|---|---|---|---|---|
| ಓದುವಿಕೆ ಮತ್ತು ಬರವಣಿಗೆ | *ಬಾಲ ಸಭೆ<br>*ಹಸ್ತ ಪತ್ರಿಕೆ<br>*ಓದಿನ ಟಿಪ್ಪಣಿ<br>*ಲೈಬ್ರರಿ ಸಜ್ಜೀಕರಣ<br>*ಭಾಷಾ ಅಸೆಂಬ್ಲಿ<br>*ದಿನಕ್ಕೊಂದು ಕಥೆ<br>*ಮಧುರ ಕನ್ನಡ<br>*ಪದ ಕಾರ್ಡು ತಯಾರಿ<br>*ಪದ ಕಾರ್ಡಿನಿಂದ ವಾಕ್ಯ ತಯಾರಿ<br>* ವಾರ್ತಾ ಪತ್ರಿಕೆಗಳನ್ನು ಓದುವುದು<br>*ಮಾಧ್ಯಮಗಳಲ್ಲಿ ಓದುವ ರೀತಿಯಲ್ಲಿ ವಾರ್ತೆಗಳನ್ನು ಓದುವುದು<br>*ದಿನಚರಿ ಓದುವುದು<br>*ಬಾಲ ಸಭೆ<br>*ಅಸೆಂಬ್ಲಿ<br>*ರಕ್ಷಕ ಶಿಕ್ಷಕ ಸಂಘದ ಸಭೆಯಲ್ಲಿ ಡಾಕ್ಯುಮೆಂಟೇಶನ್ ಪ್ರಸೆಂಟೇಷನ್ | Class Teachers | June to February | PTA<br>SSK |

# ಪರಿಸರ

| ಉದ್ದೇಶ | ಚಟುವಟಿಕೆ | ಜವಾಬ್ದಾರಿ | ಕಾಲಾವಧಿ | ಹಣಕಾಸು |
|---|---|---|---|---|
| *ಸರಳ ಪ್ರಯೋಗಗಳಲ್ಲಿ ಆಸಕ್ತಿ ಮೂಡಿಸುವುದು<br><br>*ವೈಜ್ಞಾನಿಕ ಮನೋಭಾವ ಬೆಳೆಸುವುದು<br><br>* ಪ್ರಕೃತಿ ಸಂಪತ್ತನ್ನು ಸಂರಕ್ಷಿಸುವುದು | *ತಿಂಗಳಿಗೊಂದು ಪ್ರಯೋಗ<br><br>*ಪ್ರಯೋಗ ಟಿಪ್ಪಣಿ ರಸಪ್ರಶ್ನೆ<br><br>*ಬಯಲು ಪ್ರವಾಸ<br><br>*ದಿನಾಚರಣೆಗಳು<br><br>*ಪೋಸ್ಟರ್ ತಯಾರಿ<br><br>*ಸಂದರ್ಶನ<br><br>*ಹಸ್ತಪತ್ರಿಕೆ ತಯಾರಿ<br><br>*ಹೂದೋಟ ನಿರ್ಮಾಣ<br><br>*ಆಹಾರ ಮೇಳ<br><br>*ಭೂಪಟ ಅಧ್ಯಯನ<br><br>*ಆಲ್ಬಮ್ ತಯಾರಿ<br><br>*ಎಕ್ಸಿಬಿಷನ್ | Class Teachers | June to February | PTA<br>SSK |

# ಗಣಿತ

| ಉದ್ದೇಶ | ಚಟುವಟಿಕೆ | ಜವಾಬ್ದಾರಿ | ಕಾಲಾವಧಿ | ಹಣಕಾಸು |
|---|---|---|---|---|
| *ಗಣಿತವನ್ನು ಆಸಕ್ತಿದಾಯಕವಾಗಿ ಮಾಡುವುದು<br><br>*ಚಿಂತನ ಸಾಮರ್ಥ್ಯ ಯುಕ್ತಿಯನ್ನು ಕಂಡುಹಿಡಿಯುವಂತೆ ಪ್ರೋತ್ಸಾಹಿಸುವುದು<br><br>*ಕಲಿಕೋಪಕರಣಗಳ ಮೂಲಕ ಗಣಿತ ಕಲಿಕೆ | *Maths bulletin board<br><br>*ಉಲ್ಲಾಸ ಗಣಿತ<br><br>*ತಿಂಗಳಿಗೊಂದು ರಸಪ್ರಶ್ನೆ<br><br>*ದಿನಕ್ಕೊಂದು ಜಾಣ್ಮೆ ಲೆಕ್ಕ<br><br>*ಸಂಖ್ಯಾ ಕಾರ್ಡು ತಯಾರಿ<br><br>*ಗಣಿತ ಮಗಜಿನ್<br><br>*ಜ್ಯಾಮಿತಿ ರೂಪಗಳ ತಯಾರಿ<br><br>*ಮೋಜಿನ ಗಣಿತ<br><br>*ಕಲಿಕೋಪಕರಣಗಳ ಕಾರ್ಯಗಾರ<br><br>*ಗಣಿತ ಲಾಬ್ ಸಜ್ಜೀಕರಣ<br><br>*ತರಗತಿಯಲ್ಲಿ ವ್ಯಾಪಾರ<br><br>*ಒರಿಗಾಮಿ ಆಕೃತಿಗಳ ರಚನೆ<br><br>*ಗಡಿಯಾರತಯಾರಿ<br>*ಕ್ಯಾಲೆಂಡರ್ ತಯಾರಿ<br>*ಗಣಿತಕ್ಕೆ ಸಂಬಂಧಿಸಿದ ದಿನಗಳ ಆಚರಣೆ | Class Teachers | June to February | PTA<br>SSK |

English

| ಉದ್ದೇಶ | ಚಟುವಟಿಕೆ | ಜವಾಬ್ದಾರಿ | ಕಾಲಾವಧಿ | ಹಣಕಾಸು |
|---|---|---|---|---|
| Insufficient vocabulary | * Word game<br>*word study using ICT<br>*Making cross word puzzle<br>*Dictionary making by refering the words from the text book | Class Teachers | June to february | PTA<br>SSK |
| Lack of communication skill | *Dramatisation of stories and enacting them<br>*Theatre workshop<br>*Language lab<br>*English assembly<br>*Spoken english  class | Class Teachers | June to february | PTA<br>SSK |
| Pronounciation | *Audio,video clipping on correct pronounciation<br>*classes  on phonetics by experts | Class Teachers | June to february | PTA<br>SSK |

| ಉದ್ದೇಶ | ಚಟುವಟಿಕೆ | ಜವಾಬ್ದಾರಿ | ಕಾಲಾವಧಿ | ಹಣಕಾಸು |
|---|---|---|---|---|
| *ದೈಹಿಕ ಕ್ಷಮತೆಯನ್ನು ಹೆಚ್ಚಿಸಲು<br><br>*ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಉತ್ತಮಗೊಳಿಸಲು<br><br>*ಮಕ್ಕಳಿಗೆ ಸ್ವಂತವಾಗಿ ಕಂಪ್ಯೂಟರ್ ಬಳಸಲು ಅವಕಾಶ ನೀಡುವುದು ಸುಸಜ್ಜಿತವಾದ ಐಸಿಟಿ ಲ್ಯಾಬ್ | ಆಟದ ಮೈದಾನ<br><br>ಅಡುಗೆ ಕೋಣೆ<br><br>ICT LAB | Panchayath<br><br>panchayath<br><br>panchayath | | |